ರಾಮಾಯಣದಲ್ಲಿ ಮಾನವೀಯ ಮೌಲ್ಯಗಳು

ಎಚ್.ಎಲ್. ಸೀತಾದೇವಿ

ರಾಮಾಯಣ ಮಹಾಕಾವ್ಯವು ಬಾಳಿಗೆ ಬೆಳಕಾಗಬಲ್ಲ ಹಲವು ನೈತಿಕ, ಆಧ್ಯಾತ್ಮಿಕ, ಮಾನವೀಯ ಮೌಲ್ಯಗಳನ್ನು ಒಳಗೊಂಡಿದೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕಿ 'ಕನ್ನಡಪ್ರಭ' ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿ, ಆಕಾಶವಾಣಿಯಲ್ಲಿ ವಾರ್ತಾಪ್ರಸಾರಕರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯಾಸಕ್ತರೂ, ಉತ್ತಮ ಲೇಖಕಿಯೂ ಆಗಿರುವ ಇವರು ಹಲವು ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

ಆದಿ ಕಾವ್ಯ ರಾಮಾಯಣ 'ನ ಭೂತೋ ನ ಭವಿಷ್ಯತಿ' ಎಂಬಂಥ ಮೇರು ಕೃತಿ. ಐದು ನೂರು ಸರ್ಗಗಳು, ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು. ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಜಾತಿ-ಜನಾಂಗಕ್ಕೂ ಸಲ್ಲುವಂಥ ವಿಶಿಷ್ಟ ಕೃತಿ.

ದಶಾವತಾರಗಳಲ್ಲಿ ರಾಮಾವತಾರಕ್ಕೆ ವಿಶೇಷವಾದ ಸ್ಥಾನವಿದೆ. ನಮ್ಮ ಬದುಕಿಗೆ ತುಂಬಾ ಹತ್ತಿರವಾದದ್ದು ರಾಮಾವತಾರ. ಅವತಾರ ಪುರುಷನಾದರೂ ಮನುಷ್ಯರ ನಡುವೆ ಮನುಷ್ಯರಂತೆ ಮಾನವತ್ವದಿಂದ ಹೇಗೆ ಬಾಳಬೇಕೆಂಬುದನ್ನು ತೋರಿಸಿಕೊಟ್ಟವ ಶ್ರೀರಾಮಚಂದ್ರ. ಅವನು ಆದರ್ಶಗಳೇ ಮೂರ್ತಿವೆತ್ತಂತೆ ಇದ್ದವನು. ಹುಟ್ಟಿನಿಂದ ಅವತಾರ ಸಮಾಪ್ತಿಯಾಗುವವರೆಗೂ ಅತ್ಯಂತ ಆದರ್ಶಮಯವಾದ ಜೀವನ ನಡೆಸಿದವನು. ರಾಮ ಗುಣವಂತ, ವೀರ್ಯವಂತ, ಮಾನವ ಧರ್ಮದ ಮೂರ್ತ ರೂಪವೇ ಆಗಿದ್ದ. ಅವನಲ್ಲಿ ೧೬ ಗುಣಗಳು ಮೇಳೈಸಿದ್ದವು.

ಭಗವದ್ಗೀತೆಯಲ್ಲಿ ಕಥೆಯೇ ಇಲ್ಲ, ಅಲ್ಲಿರುವುದು ಕೇವಲ ಉಪದೇಶ. ಆದರೆ ರಾಮಾಯಣ ಹಾಗಲ್ಲ. ಅಲ್ಲಿ ಉಪದೇಶ, ಬೋಧನೆ ಕಿಂಚಿತ್ತೂ ಇಲ್ಲ. ಅದೊಂದು ಮಹಾ ನಾಟಕ. ಅಲ್ಲಿನ ಪಾತ್ರಗಳು ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಲೇ, ತಮ್ಮ ನಡವಳಿಕೆಯಿಂದಲೇ ನೀತಿ ಬೋಧೆ ಮಾಡುತ್ತವೆ.

ತಂದೆ-ಮಗ, ತಾಯಿ-ಮಗ, ರಾಜ-ಪ್ರಜೆ, ಪತಿ-ಪತ್ನಿ, ಮಿತ್ರ-ಶತ್ರು, ಸ್ವಾಮಿ-ಭೃತ್ಯರ ಸಂಬಂಧ ಹೇಗಿರಬೇಕೆಂಬುದನ್ನು ಅದು ಬಹಳ ಅಚ್ಚುಕಟ್ಟಾಗಿ ನಿರೂಪಿಸುತ್ತದೆ. ತನಗೆ ಕೇಡು ಬಯಸಿದವರಿಗೂ ಹಿತವನ್ನೇ ಹಾರೈಸುವ ಔದಾರ್ಯ ಶ್ರೀರಾಮ ಚಂದ್ರನದು. ಪಿತೃವಾಕ್ಯ ಪರಿಪಾಲನೆ, ಕೊಟ್ಟ ಮಾತಿಗೆ ತಪ್ಪದ ವಚನ ಬದ್ಧತೆಗೆ ಪರ್ಯಾಯ ಹೆಸರೇ ಶ್ರೀರಾಮ. ಹೆಣ್ಣಿನ ತ್ಯಾಗ, ಸಹನಶೀಲತೆಗೆ ಅತ್ಯುತ್ತಮ ನಿದರ್ಶನ ಸೀತಾಮಾತೆ, ಊರ್ಮಿಳೆಯರು.

ಅಯೋಧ್ಯಾ ಕಾಂಡ, ರಾಮಾಯಣದ ಹೃದಯ ಭಾಗ. ಅಲ್ಲಿ ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ, ಮಿತ್ರ ಪ್ರೇಮ, ತ್ಯಾಗ, ವೈರಾಗ್ಯಗಳಂತಹ ಜೀವನ ಮೌಲ್ಯಗಳು ಹರಳುಗಟ್ಟಿವೆ.

ಭಾರತೀಯ ಸಂಸ್ಕೃತಿಯ ಆದರ್ಶಗಳನ್ನು ಸಮಗ್ರವಾಗಿ ಪ್ರತಿನಿಧಿಸುವ ಏಕೈಕ ವ್ಯಕ್ತಿ ಶ್ರೀರಾಮ. ಹುಟ್ಟಿನಿಂದ ಸಾಯುವವರೆಗೆ ಧರ್ಮಕ್ಕೆ ಒಂದಿಷ್ಟೂ ಲೋಪಬಾರದಂತೆ ನಡೆದುಕೊಂಡವನು. ಹಾಗಾಗಿಯೇ ಶ್ರೀರಾಮನನ್ನು ವಾಲ್ಮೀಕಿ ಮಹರ್ಷಿಗಳು 'ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯ ಪರಾಕ್ರಮಃ, ರಾಜಾ ಸರ್ವಸ್ಯ ಲೋಕಸ್ಯ ದೇವಾನಾಂ ಮಘವಾನಿವ' ಎಂದು ಬಣ್ಣಿಸಿರುವುದು.

ದಶರಥ-ಕೌಸಲ್ಯೆಯರಿಗೆ ಅವನು ಸುಪ್ರಜಾ (ಒಳ್ಳೆಯ ಮಗ) ರಾಮ. ರಾಮ-ಸೀತೆ ಆದರ್ಶ ದಾಂಪತ್ಯಕ್ಕೆ, ರಾಮ-ಲಕ್ಷ್ಮಣ, ಜಟಾಯು-ಸಂಪಾತಿ ಸೋದರ ವಾತ್ಸಲ್ಯಕ್ಕೆ, ರಾಮ-ಹನುಮ ಆತ್ಮೀಯ ಭಾವಕ್ಕೆ ಜ್ವಲಂತ ನಿದರ್ಶನವಾಗಿದ್ದಾರೆ.

ರಾಮನ ಆದರ್ಶ ವ್ಯಕ್ತಿತ್ವಕ್ಕೆ, ಅಸಾಧಾರಣ ತ್ಯಾಗ, ತಾಳ್ಮೆಗೆ ಉದಾಹರಣೆ ಕೈಕೇಯಿ ಪ್ರಸಂಗ.

ದಶರಥ ಮಹಾರಾಜ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿ, ವಾನಪ್ರಸ್ಥಕ್ಕೆ ತೆರಳಲು ನಿರ್ಧರಿಸಿದ್ದ. ಆಗ ಮಂಥರೆಯ ದುರ್ಬೋಧನೆಯಿಂದ ಕೈಕೇಯೀ, ಹಿಂದೆ ದೇವಾಸುರ ಯುದ್ಧದ ಸಮಯದಲ್ಲಿ ತನಗಿತ್ತಿದ್ದ ವರ ಬೇಕೆಂದು ಕೇಳಿದಳು. ಆಗ ಇಡೀ ಚಿತ್ರಣವೇ ಬದಲಾಗಿ ಹೋಯಿತು. ಸಂಭ್ರಮ-ಸಡಗರಗಳಿಂದ ತುಂಬಿದ್ದ ಅರಮನೆಯಲ್ಲಿ ಶೋಕ ಮಡುಗಟ್ಟಿತು. ರಾಜ ಪರಿ ಪರಿಯಾಗಿ ಕೇಳಿದರೂ ಕೈಕೇಯೀ ಹಿಡಿದ ಪಟ್ಟು ಬಿಡಲಿಲ್ಲ. ದಶರಥ ಮಹಾರಾಜ ಮೂರ್ಛೆ ಬೀಳುತ್ತಾನೆ. ಅದೇ ಸಮಯಕ್ಕೆ ಅಲ್ಲಿಗೆ ಬಂದ ರಾಮ, ತಂದೆಯ ದೈನ್ಯ ಸ್ಥಿತಿಯನ್ನು ಕಂಡು ಹಾವು ತುಳಿದಂತೆ ಬೆಚ್ಚುತ್ತಾನೆ.

ತದಪೂರ್ವಂ ನರಪತೇರ್ದೃಷ್ಟ್ವಾ ರೂಪಂ ಭಯಾವಹಂ ।
ರಾಮೋಽಪಿ ಭಯಮಾಪನ್ನಃ ಪದಾ ಸ್ಪೃಷ್ಟ್ವೇವ ಪನ್ನಗಂ ॥

'ತಂದೆಯ ಕಳೆಗುಂದಿದ ಮುಖ, ಶೋಕಾಕುಲತೆಯನ್ನು ಕಂಡ ರಾಮನಿಗೆ ಹಾವು ಮೆಟ್ಟಿದಂತಾಗುತ್ತದೆ.'

ಸ್ವಲ್ಪ ಸಮಯದ ನಂತರ ಮೂರ್ಛೆ ತಿಳಿದೆದ್ದ ದಶರಥ ಮಹಾರಾಜ 'ಮುದಿ ರಾಜ ಮೋಹವಶನಾಗಿ ನೀಡಿದ್ದ ವಚನಕ್ಕೆ ನೀನು ಬದ್ಧನಾಗಬೇಕಾಗಿಲ್ಲ. ನನ್ನನ್ನು ಕೊಂದಾದರೂ ಸರಿ, ನೀನು ಸಿಂಹಾಸನವೇರು' ಎಂದಾಗ ಶ್ರೀರಾಮ, 'ಹಾಗೊಂದು ವೇಳೆ ನಾನು ರಾಜನಾಗಿ ಪಟ್ಟವೇರಿದರೆ ಪ್ರಜೆಗಳಿಗೆ ಎಂಥ ಮೇಲ್ಪಂಕ್ತಿ ಹಾಕಬಹುದು? ಪಿತೃ ವಾಕ್ಯ ಪರಿಪಾಲನೆ, ಪುತ್ರಧರ್ಮ, ತಂದೆ-ತಾಯಿಯರ ಮಾತನ್ನು ಗೌರವಿಸುವುದು ಮಕ್ಕಳ ಕರ್ತವ್ಯವಲ್ಲವೆ?' ಎನ್ನುತ್ತಾನೆ.

'ಮಹಾರಾಜ ಆಜ್ಞೆ ಮಾಡಿದರೆ ಸಮುದ್ರಕ್ಕೇ ಹಾರುತ್ತೇನೆ. ಬೆಂಕಿಯಲ್ಲಿ ಬೇಕಾದರೂ ಬೀಳುತ್ತೇನೆ. ಘೋರ ವಿಷವನ್ನಾದರೂ ಕುಡಿಯುತ್ತೇನೆ. ತಂದೆಯಾಗಿ, ದೊರೆಯಾಗಿ ನೀನು ಮಾಡುವ ಆಜ್ಞೆ ನನಗೆ ಶಿರೋಧಾರ್ಯ. ಈ ರಾಮ ಎಂದೂ ಎರಡು ಮಾತನಾಡುವವನಲ್ಲ' ಎಂದು ಹೇಳುತ್ತಾನೆ.

ಈ ಮಾತನ್ನು ಕೇಳಿ ದಶರಥ ಮಹಾರಾಜ ದುಃಖ, ಸಂಕಟದಿಂದ ಬೆಂದು ಹೋದರೆ, ರಾಮ ಯಾವುದೇ ರೀತಿಯ ಅಸಮಾಧಾನ ತೋರದೆ ಶಾಂತಚಿತ್ತನಾಗಿರುತ್ತಾನೆ. ಇಂಥ ಸಮಚಿತ್ತ, ತ್ಯಾಗ, ತಾಳ್ಮೆ ಇಂದಿಗೂ ಪ್ರಸ್ತುತವೆನಿಸುವ ಮೌಲ್ಯವಲ್ಲವೆ?

ವನವಾಸಕ್ಕೆ ತೆರಳುವ ಮುನ್ನ ತಂದೆಯ ಆಶೀರ್ವಾದ ಪಡೆಯಲು ಬಂದ ರಾಮ, 'ಅಪ್ಪಾ, ಪುತ್ರಶೋಕ ನಿಮ್ಮಂತೆಯೇ ಅಮ್ಮನನ್ನು ಕಾಡುತ್ತದೆ. ಆಕೆಗೆ ನೀವೇ ಜಗತ್ತು. ಆಕೆ ನಿಮ್ಮನ್ನೇ ನೆಚ್ಚಿಕೊಂಡಿದ್ದಾಳೆ. ನೀವೂ ಅಷ್ಟೇ, ನನ್ನ ಮೇಲಿನ ಪ್ರೀತಿ ನಿಜವೇ ಆದರೆ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳಿ' ಎಂದು ಮನವಿ ಮಾಡುತ್ತಾನೆ.

ಇತ್ತ ಕೌಸಲ್ಯೆ, 'ನಿನಗಿಲ್ಲದ ರಾಜ ವೈಭೋಗ ನನಗೂ ಬೇಡ. ನೀನಿಲ್ಲದ ಅರಮನೆ ನನಗೆ ಅಡವಿಗೆ ಸಮಾನ. ನಾನು ನಿನ್ನೊಂದಿಗೆ ವನವಾಸಕ್ಕೆ ಬರುತ್ತೇನೆ' ಎಂದಾಗ ಶ್ರೀರಾಮ, 'ರಾಜ್ಯ ಭಾರದ ನೊಗ ಹೊತ್ತ ಅಪ್ಪನ ಹೆಗಲು ಕುಸಿಯದಂತೆ ನೋಡಿಕೊಳ್ಳಲು ನೀನಿಲ್ಲೇ ಇರಬೇಕಮ್ಮಾ' ಎಂದು ಸಂತೈಸುತ್ತಾನೆ. ಅದಕ್ಕೇ ಅಲ್ಲವೇ ಅವನು ಸುಪ್ರಜಾ–ಒಳ್ಳೆಯ ಮಗ–ರಾಮ ಎನಿಸಿದ್ದು? ಸತಿ–ಪತಿಗಳು ಒಂದಾಗಿ ಸಂಸಾರದ ನೊಗ ಎಳೆಯಬೇಕೆಂಬುದು ಎಲ್ಲ ಕಾಲಕ್ಕೂ ಪ್ರಸ್ತುತವಾಗುವ ಮೌಲ್ಯವೇ ಅಲ್ಲವೆ?

ಇನ್ನು ಪುರಜನರನ್ನು ಅವನು ಸಮಾಧಾನಪಡಿಸುವ ಪರಿ ನೋಡಿ– 'ಮಾತೆ ಕೈಕೇಯಿಗೆ ಭರತನಿಗಿಂತ ನನ್ನ ಮೇಲೆ ಹೆಚ್ಚು ಪ್ರೀತಿ. ಹಾಗಾಗೇ ಅವಳು ಭರತನಿಗೆ ಇಡೀ ರಾಜ್ಯದ ಭಾರ ಹೊರಿಸಿದರೆ, ನನಗೆ ಮಾತ್ರ ನನ್ನ ಕಾಯದ ಭಾರವನ್ನಷ್ಟೇ ಹೊರಿಸುತ್ತಿದ್ದಾಳೆ.' ಕೆಡುಕಿನಲ್ಲೂ ಒಳಿತನ್ನೇ ಕಾಣುವ ಇದೆಂಥ ಸಹನೆ? ಇದೆಂಥ ಸಕಾರಾತ್ಮಕ ಚಿಂತನೆ?

ಕೌಸಲ್ಯೆಯ ಅಂತಃಪುರದಲ್ಲಿ ದುಃಖದಿಂದ ಮಮ್ಮಲ ಮರುಗುತ್ತಾ ಹಾಸಿಗೆ ಹಿಡಿದ ದಶರಥ ಮಹಾರಾಜ, ಬೇಟೆಯ ಹುಮ್ಮಸ್ಸಿನಲ್ಲಿ ತಾನು ಮುನಿ ಕುಮಾರನೊಬ್ಬನನ್ನು ಕೊಂದಿದ್ದು, ಅವನ ತಂದೆ, ತಾಯಿಗಳು 'ನಿನಗೂ ಪುತ್ರಶೋಕ ಉಂಟಾಗಲಿ' ಎಂದು ಶಪಿಸಿದ್ದನ್ನು ಹೇಳಿಕೊಂಡು ಹಲುಬುತ್ತಾನೆ. ಇಂಥ ತಪ್ಪೊಪ್ಪಿಗೆ, ಕರ್ಮಫಲದ ಸ್ವೀಕಾರ, ಎಲ್ಲರೂ ಮಾಡಲೇ ಬೇಕಾದ ಕರ್ತವ್ಯವಲ್ಲವೆ?

ಹೀಗೆ ರಾಮಾಯಣದ ಉದ್ದಕ್ಕೂ ಒಂದೊಂದು ಪ್ರಸಂಗದಲ್ಲೂ ಒಂದೊಂದು ಮಾನವೀಯ ಮೌಲ್ಯಗಳು ಪ್ರಕಟವಾಗುತ್ತಲೇ ಹೋಗುತ್ತವೆ.

'ಕಾಮಾಂಧನಾದ ಲಂಪಟ, ಮತಿಗೆಟ್ಟ ಮುಪ್ಪ ದೊರೆ ಹೆಣ್ಣಿನ ಮಾತಿಗೆ ಕಟ್ಟುಬಿದ್ದರೆ ನೀನೇಕೆ ವನವಾಸಿಯಾಗಬೇಕು?' ಎಂದು ಅನುಜ ಲಕ್ಷ್ಮಣ ಆರ್ಭಟಿಸಿದಾಗ, ರಾಮ ಅವನನ್ನು ಸಮಾಧಾನಪಡಿಸುವ ರೀತಿ ನೋಡಿ–'ಧರ್ಮಕ್ಕಿಂತ ಬೇರೆ ಸಿರಿ ಇನ್ನೊಂದಿಲ್ಲ. ಪುತ್ರಧರ್ಮ ಪಾಲನೆ ನನ್ನ ಕರ್ತವ್ಯ. ಧರ್ಮ ಮಾರ್ಗಿಯಾಗಿದ್ದರೆ ಅಡವಿಯೇ ಅರಮನೆಯಾಗುತ್ತದೆ. ಧರ್ಮ ಬಿಟ್ಟರೆ, ಸ್ವರ್ಣಮಯವಾದ ಅರಮನೆಯೂ ಶ್ಮಶಾನ ಸದೃಶವಾಗುತ್ತದೆ.' ಇದೆಂಥ ಸ್ಥಿತಪ್ರಜ್ಞೆ?

ಅದೇ ಸಮಚಿತ್ತದಿಂದ ತಂದೆ ದಶರಥ, ತಾಯಿ ಕೌಸಲ್ಯೆಯರನ್ನೂ ಸಂತೈಸುತ್ತಾನೆ–'ಮಾತೆ ಕೈಕೇಯಿಯ ಬಗ್ಗೆ ಕಟು ಮಾತುಗಳನ್ನಾಡಬೇಡಿ. ಮಗನಿಗಾಗಿ ಆಕೆ ಆಸೆ ಪಟ್ಟದ್ದು ತಪ್ಪಲ್ಲ' ಎಂದು ತಿಳಿ ಹೇಳುತ್ತಾನೆ. ಮನುಷ್ಯತ್ವವನ್ನು ಮೀರಿದ ದೈವತ್ವದ ಆದರ್ಶ ಇದು. ಪಟ್ಟಾಭಿಷೇಕದ ಸುದ್ದಿಯಿಂದ ಹಿಗ್ಗದ, ವನವಾಸಕ್ಕೆ ತೆರಳಬೇಕೆಂದಾಗ ಕುಗ್ಗದ ಸ್ಥಿತಪ್ರಜ್ಞ ಅವನು, ಸಂಯಮಿಯೂ ಹೌದು.

ಶ್ರೀರಾಮ ಆದರ್ಶ ಪುತ್ರ, ಪತಿ, ಸೋದರ, ರಾಜ, ಸಖ–ಹೀಗೆ ಎಲ್ಲ ಪಾತ್ರಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದವ. ಈ ವಿಷಯದಲ್ಲಿ ಅವನಿಗೆ ಸರಿಸಾಟಿಯಾಗಿ ನಿಲ್ಲಬಲ್ಲವರು ಯಾರೂ ಇಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ಆಯಾ ಪಾತ್ರಗಳನ್ನು ಅವನು ನಿರ್ವಹಿಸಿದ ರೀತಿ, ಎಲ್ಲ ಕಾಲಕ್ಕೂ ಎಲ್ಲರಿಗೂ ಅನುಸರಣಾರ್ಹವೇ.

ಶ್ರೀರಾಮನ ಭ್ರಾತೃಪ್ರೇಮ ಅಸದೃಶ. ಲಕ್ಷ್ಮಣನಿಲ್ಲದ ರಾಮಾಯಣ ಅಪೂರ್ವವೆನಿಸುತ್ತದೆ. ಲಕ್ಷ್ಮಣ, ರಾಮನನ್ನು ನೆರಳಿನಂತೆ ಅನುಸರಿಸುತ್ತಿದ್ದ. ಭರತ ಶತ್ರುಘ್ನರ ವಿಷಯದಲ್ಲೂ ಈ ವಾತ್ಸಲ್ಯ ಏಕಪ್ರಕಾರವಾಗಿತ್ತು.

ರಾಮ ಅತ್ತ ವನವಾಸಕ್ಕೆ ತೆರಳಿದ್ದ. ಇತ್ತ ದಶರಥನ ದೇಹಾವಸಾನವಾಗಿತ್ತು. ಭರತ ತಾತನ ಮನೆಯಿಂದ ಹಿಂದಿರುಗಿದ, ತಂದೆ, ಅಣ್ಣನನ್ನು ಕಾಣದೆ ವಿಲವಿಲ ಪರಿತಪಿಸಿದ. ಪುತ್ರಶೋಕದಿಂದ ಅಸುನೀಗಿದ್ದ ದಶರಥ ಮಹಾರಾಜನ ಅಂತ್ಯಸಂಸ್ಕಾರ ಮಾಡಿ, ಒಂದು ಕ್ಷಣವೂ ತಡ ಮಾಡದೆ ರಾಮನನ್ನು ಹುಡುಕುತ್ತಾ ಹೊರಟ. ಅವನ ಹೃದಯದಲ್ಲಿ ತಾಯಿಯ ಬಗ್ಗೆ ಅತಿಯಾದ ತಿರಸ್ಕಾರ ಹೆಪ್ಪುಗಟ್ಟಿತ್ತು. ಕೊನೆಗೂ ಚಿತ್ರಕೂಟದಲ್ಲಿ ರಾಮನನ್ನು ಸಂಧಿಸಿ, ಅಯೋಧ್ಯೆಗೆ ಹಿಂದಿರುಗಬೇಕೆಂದು ಪರಿಪರಿಯಾಗಿ ಬೇಡಿಕೊಂಡ. ಆದರೆ ರಾಮನದು ಒಂದೇ ಮಾತು. 'ತಂದೆಗೆ ಕೊಟ್ಟ ಮಾತನ್ನು ಉಲ್ಲಂಘಿಸಲಾರೆ.' ಇಲ್ಲಿ ರಾಮನ ದೃಢ ಚಿತ್ತ, ನೈತಿಕತೆ ವಿಜೃಂಭಿಸಿದರೆ, ಭರತನ ಭ್ರಾತೃವಾತ್ಸಲ್ಯ ಎದ್ದು ಕಾಣುತ್ತದೆ.

ಒಂದು ಹಂತದಲ್ಲಿ ಭರತನ ಮಾತಿನಲ್ಲಿ ಕೈಕೇಯಿಯ ಬಗ್ಗೆ ಇದ್ದ ಅಗೌರವದ ದನಿಯನ್ನು ಗುರುತಿಸಿದ ಶ್ರೀರಾಮ, 'ತಾಯಿಯನ್ನು ಗೌರವಿಸು' ಎಂದು ತಿಳಿಯ ಹೇಳುತ್ತಾನೆ.

ವನವಾಸ ಮುಗಿಸಿ ರಾಮ ಹಿಂದಿರುಗಿದ ಕ್ಷಣ ಭರತ, 'ಅಣ್ಣಾ, ತಾಯಿಯನ್ನು ಗೌರವಿಸುತ್ತಿದ್ದೇನೆ. '**ಪೂಜಿತಾ ಮಾಮಿಕಾ ಮಾತಾ, ದತ್ತಂ ರಾಜ್ಯೇದಂ ಮಮ, ತದ್ದದಾಮಿ ಪುನಸ್ತುಭ್ಯಂ**' ಎಂದು ಹೇಳುತ್ತಾನೆ. 'ಮಾತೃದೇವೋ ಭವ' ಎಂಬ ನಮ್ಮ ಸಂಸ್ಕೃತಿಯ ಮೂಲ ಪಾಠ ಇದು. ಇದು ಇಂದಿಗೂ ಪ್ರಸ್ತುತವಾದ ಮೌಲ್ಯವೇ ಆಗಿದೆ.

ಮುಂದೆ ಸೀತಾಪಹರಣದ ಪ್ರಸಂಗ. ಸೀತೆಯನ್ನು ಹುಡುಕುತ್ತಾ ಹೊರಟ ರಾಮನಿಗೆ ಸುಗ್ರೀವನ ಸಖ್ಯವಾಗುತ್ತದೆ. ಅಣ್ಣ ವಾಲಿ ಅನ್ಯಾಯದಿಂದ ಕಿತ್ತುಕೊಂಡಿದ್ದ ತನ್ನ ರಾಜ್ಯವನ್ನು ಮರಳಿ ದೊರಕಿಸಿಕೊಡಬೇಕೆಂದು ಸುಗ್ರೀವ ಮನವಿ ಮಾಡುತ್ತಾನೆ. ಅದಕ್ಕೆ ಒಪ್ಪಿದ ರಾಮ, ಸೀತಾನ್ವೇಷಣೆಗೆ ನೆರವಾಗಬೇಕೆಂದು ಕೋರುತ್ತಾನೆ. ಇಲ್ಲಿ ರಾಮನೆಂಥ ಆದರ್ಶ ಸ್ನೇಹಿತ ಎಂಬುದು ನಮಗೆ ಮನವರಿಕೆಯಾಗುತ್ತದೆ. ಸುಗ್ರೀವನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರಾಮ ಲೋಕನಿಂದೆಗೂ ಅಳುಕುವುದಿಲ್ಲ. ಎಂಥೆಂಥ ರಾಕ್ಷಸರನ್ನೋ ನೇರ ಯುದ್ಧದಲ್ಲಿ ಸದೆಬಡಿದಿದ್ದ ರಾಮನಿಗೆ ವಾಲಿಯನ್ನು ಕೊಲ್ಲುವುದು ಕಷ್ಟವೇನೂ ಆಗಿರಲಿಲ್ಲ. ಹಾಗಿದ್ದರೆ ಅವನನ್ನು ಹಿಂದಿನಿಂದ ಕೊಂದಿದ್ದೇಕೆ ಎಂದರೆ, ತನ್ನ ವ್ಯಕ್ತಿತ್ವಕ್ಕೆ ಮಾರುಹೋಗಿ ವಾಲಿಯೇನಾದರೂ ಶರಣಾಗಿ ಬಂದಿದ್ದರೆ ತೊಂದರೆಯಾಗಿ ಬಿಡುತ್ತಿತ್ತು. ಎಂಥದ್ದೇ ಸಂದರ್ಭ ಬಂದರೂ ಸರಿ, ಶರಣಾದವರಿಗೆ ಅಭಯ ನೀಡುವುದು ರಾಮನ ವ್ರತವಾಗಿತ್ತು. ಹಾಗೇನಾದರೂ ಆಗಿದ್ದರೆ ಸುಗ್ರೀವನಿಗೆ ಇತ್ತಿದ್ದ ವಚನ ಭಂಗವಾಗುತ್ತಿತ್ತು. ಅದಕ್ಕಾಗಿ ರಾಮ ಲೋಕಾಪವಾದಕ್ಕೂ ಹಿಂಜರಿಯಲಿಲ್ಲ. ನಂಬಿದವರನ್ನೆಲ್ಲ ಉದ್ಧರಿಸಿದವ ಅವನು.

ಸೀತಾಮಾತೆಯನ್ನು ಹುಡುಕಿಕೊಂಡು ಹನುಮಂತ ಎಲ್ಲೆಲ್ಲಿ ತಿರುಗಿದರೂ ಆಕೆಯ ಸುಳಿವು ಸಿಗುವುದಿಲ್ಲ. ಇದರಿಂದ ಬೇಸತ್ತ ಆತನಿಗೆ ಒಂದು ಕ್ಷಣ ಆತ್ಮಹತ್ಯೆಯ ಆಲೋಚನೆ ಬರುತ್ತದೆ. ವಿಶ್ವಾಸವಿಟ್ಟು ಒಪ್ಪಿಸಿದ ಕೆಲಸವನ್ನು ಸಾಧಿಸದೆ ನನ್ನ ಸ್ವಾಮಿಗೆ ಹೇಗೆ ಮುಖ ತೋರಿಸುವುದು? ಅದಕ್ಕಿಂತ ಸಾಯುವುದೇ ಮೇಲು ಎಂದುಕೊಳ್ಳುತ್ತಾನೆ. ಮರುಕ್ಷಣವೇ ಅವನಿಗೆ ಜ್ಞಾನೋದಯವಾಗುತ್ತದೆ.

ವಿನಾಶೇ ಬಹವೋ ದೋಷಾಃ ಜೀವನ್ ಭದ್ರಾಣಿ ಪಶ್ಯತಿ ।
ತಸ್ಮಾತ್ ಪ್ರಾಣಾನ್ ಧರಿಷ್ಯಾಮಿ ಧ್ರುವೋ ಜೀವಿತಸಂಗಮಃ ॥

ಬದುಕಿದ್ದರೆ ಇಂದಲ್ಲ ನಾಳೆ ಒಳಿತನ್ನು ಕಾಣಬಹುದು. ಒಂದಲ್ಲ ಒಂದು ದಿನ ಸೀತಾಮಾತೆ ಸಿಕ್ಕೇ ಸಿಗುತ್ತಾಳೆ ಎಂದುಕೊಂಡು ಆ ಕ್ಷಣಿಕ ದೌರ್ಬಲ್ಯದಿಂದ ಹೊರಬರುತ್ತಾನೆ. ಸಣ್ಣಪುಟ್ಟ ವಿಷಯಗಳಿಗೆಲ್ಲ ಆತ್ಮಹತ್ಯೆಯಾಗುತ್ತಿರುವ ಇಂದಿನ ದಿನಗಳಲ್ಲಿ ಇದು ಸ್ವೀಕಾರಾರ್ಹವಾದ ಸಂದೇಶವಲ್ಲವೆ?

ಲಂಕೆಯಲ್ಲಿ ರಾವಣನ ಮಂತ್ರಾಲೋಚನಾ ಸಭೆಯಲ್ಲಿ ವಿಭೀಷಣ ಅಣ್ಣ ರಾವಣನಿಗೆ ಬುದ್ಧಿವಾದ ಹೇಳುತ್ತಾನೆ: 'ಪರಪುರುಷನ ಪತ್ನಿಯ ಅಪಹರಣ ಅತ್ಯಂತ ಹೇಯ ಕೃತ್ಯ. ನೀನು ಪರಮ ಕಷ್ಟಕ್ಕೆ ಸಿಲುಕುತ್ತೀಯೆ. ಹದಿನಾಲ್ಕು ಸಾವಿರ ಯೋಧರನ್ನು ಕೊಂದ ಕಡುಗಲಿ ರಾಮನೊಡನೆ ವೈರ ಬೆಳೆಸಿಕೊಳ್ಳುವುದು ಆತ್ಮವಿನಾಶದ ಮೂರ್ಖತನ. ಈಗಲೂ ಕಾಲ ಮಿಂಚಿಲ್ಲ. 'ಪ್ರದೀಯತಾಂ ದಾಶರಾಥಾಯ ಮೈಥಿಲೀ' ಸೀತಾಮಾತೆಯನ್ನು ಭಕ್ತಿಯಿಂದ ರಾಮನಿಗೆ ಒಪ್ಪಿಸಿಬಿಡು.' ಮತ್ತೆ ಮತ್ತೆ ಇದೇ ಮಾತನ್ನು ಹೇಳುತ್ತಾನೆ. ಕುಂಭಕರ್ಣ ಕೂಡ ರಾವಣ ಮಾಡಿದ್ದು ಸರ್ವಥಾ ನಿಂದ್ಯ, ಆದರೆ ರಾಜ್ಯ ಮತ್ತು ರಾಜನನ್ನು ರಕ್ಷಿಸಬೇಕಾದ್ದು ತನ್ನ ಕರ್ತವ್ಯವಾದ್ದರಿಂದ ಯುದ್ಧಕ್ಕೆ ಸಿದ್ಧ ಎನ್ನುತ್ತಾನೆ.

ಒಂದು ಹಂತದಲ್ಲಿ ರೋಸಿಹೋದ ರಾವಣ, 'ನೀನು ನನ್ನ ತಮ್ಮನಾಗಿರದಿದ್ದರೆ ಇಂದೇ, ಇಲ್ಲೇ ನಿನ್ನನ್ನು ಕೊಂದುಬಿಡುತ್ತಿದ್ದೆ' ಎಂದು ಆರ್ಭಟಿಸುತ್ತಾನೆ.

ತನ್ನ ಬುದ್ಧಿಮಾತಿಗೆ ಬೆಲೆ ಇಲ್ಲದಿರುವ ಕಡೆ ಇನ್ನು ಇರುವುದು ಸರಿಯಲ್ಲ ಎಂದು ತೀರ್ಮಾನಿಸಿದ ವಿಭೀಷಣ ಲಂಕೆಯನ್ನು ತೊರೆದು ಶ್ರೀರಾಮನ ಬಳಿಗೆ ಬರುತ್ತಾನೆ. 'ನಾನು ಲಂಕಾಧಿಪತಿ ರಾವಣನ ತಮ್ಮ. ಅವನ ನಡವಳಿಕೆಯಿಂದ ಬೇಸತ್ತು, ನನ್ನ ನಾಲ್ವರು ಮಂತ್ರಿಗಳೊಡನೆ ರಾಮನಲ್ಲಿ ಶರಣಾಗಿದ್ದೇನೆ' ಎಂದು ಘೋಷಿಸುತ್ತಾನೆ.

ಯುದ್ಧದ ಸಮಯದಲ್ಲಿ ಅಣ್ಣನಿಗೆ ಕೈಕೊಟ್ಟು ಬಂದಿರುವ ಇವನನ್ನು ನಂಬುವುದು ಹೇಗೆ? ಇದರಲ್ಲಿ ಏನೋ ಪಿತೂರಿಯಿದೆ. ಅವನಿಗೆ ಖಂಡಿತಾ ಆಶ್ರಯ ನೀಡಬಾರದು ಎಂದು ಕಪಿರಾಜ ಸುಗ್ರೀವ ಪಟ್ಟು ಹಿಡಿದಾಗ ರಾಮ,

ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಂ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತತ್ ವ್ರತಂ ಮಮ ॥

'ಅವನು ವಿಭೀಷಣನೋ ಇಲ್ಲ ಸ್ವತಃ ರಾವಣನೇ ಆಗಿರಲಿ, ಶರಣು ಬಂದವರಿಗೆ ಅಭಯ ನೀಡುವುದು ನನ್ನ ವ್ರತ' ಎನ್ನುತ್ತಾನೆ. ಇದೆಂಥ ಔದಾರ್ಯ? ಅದಕ್ಕೇ ಅಲ್ಲವೇ ಅವನು ಔದಾರ್ಯದ ನಿಧಿ ಎನಿಸಿಕೊಂಡಿರುವುದು!

ಮುಂದೆ ರಣರಂಗದಲ್ಲಿ ಒಂದು ಹಂತದಲ್ಲಿ ರಥ, ಸಾರಥಿ ಎಲ್ಲವನ್ನೂ ಕಳೆದುಕೊಂಡು ರಾವಣ ಬರಿಗೈಯಲ್ಲಿ ತಲೆತಗ್ಗಿಸಿ ನಿಂತಿರುತ್ತಾನೆ. ಆಗ ಅವನಿಗೆ ಜೀವದಾನ ಮಾಡಿ, ನಾಳೆ ಶಸ್ತ್ರಸಜ್ಜಿತನಾಗಿ ಬಾ, ಯುದ್ಧ ಮಾಡೋಣ ಎಂದು ಹೇಳಿಕಳಿಸಿದ ಮಹಾನುಭಾವ ಶ್ರೀರಾಮ.

ರಾಮ ಪರಿಪೂರ್ಣ ಪುರುಷೋತ್ತಮ. ಇದ್ದರೆ ಇಂಥ ಶತ್ರು ಅಥವಾ ಮಿತ್ರ ಇರಬೇಕು ಎಂದು ಸ್ವತಃ ರಾವಣನೇ ಅವನನ್ನು ಹಾಡಿಹೊಗಳಿದ್ದಾನೆ. ರಾವಣನ ಪ್ರತಿಭೆ ಆದಿತ್ಯನಿಗೆ ಸಮ. ಅವನ ದೇಹಕಾಂತಿ ಯಾವ ದೇವ, ದಾನವರಿಗೂ ಇಲ್ಲ ಎಂದು ರಾಮ ಕೊಂಡಾಡುತ್ತಾನೆ. ಅದಕ್ಕೇ ಅಲ್ಲವೇ ಮತ್ಸರಗ್ರಸ್ತರಾದ ಸ್ನೇಹಿತರಿಗಿಂತ ಸಾರಗ್ರಾಹಿಗಳಾದ ಶತ್ರುಗಳೇ ಮೇಲು ಎನ್ನುವುದು?

ಹಾಗೆಯೇ ಹನುಮಂತ ಕೂಡ ಲಂಕೆಯಲ್ಲಿ ರಾವಣನನ್ನು ಕಂಡ ತಕ್ಷಣ, 'ಏನು ರೂಪ ಈ ದಾನವೇಂದ್ರನದು' ಎಂದು ಉದ್ಗರಿಸುತ್ತಾನೆ.

ಅಹೋ ರೂಪಮಹೋ ಧೈರ್ಯಂ ಅಹೋ ಸತ್ತ್ವಮಹೋ ದ್ಯುತಿಃ।
ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ ॥

ಎಷ್ಟೆಲ್ಲ ಕಾಂತಿಯುಕ್ತ, ಸತ್ತ್ವಯುಕ್ತನಾಗಿದ್ದಾನೆ ಈ ರಾಕ್ಷಸ ರಾಜ! ಎಲ್ಲ ಲಕ್ಷಣಗಳ ಮೂರ್ತರೂಪದಂತಿರುವ ಇವನು ಒಂದು ವೇಳೆ ಸಚ್ಚರಿತ್ರನಾಗಿದ್ದರೆ ದೇವಲೋಕವನ್ನೇ ಆಳಬಹುದಿತ್ತು ಎಂದು ಕೊಳ್ಳುತ್ತಾನೆ ಹನುಮಂತ. ಶತ್ರುವಾದರೂ ಸರಿ, ಅವನಲ್ಲಿರುವ ಗುಣವನ್ನು ಗ್ರಹಿಸುವ ಈ ಪರಿ, ಇಂದಿಗೂ ಪ್ರಸ್ತುತ ಎನಿಸುವುದಿಲ್ಲವೆ?

ಮುಂದೆ ರಾವಣ ಸಂಹಾರವಾಗುತ್ತದೆ. ಆ ವೇಳೆಗೆ ಅವನ ಮಕ್ಕಳೆಲ್ಲಾ ಯುದ್ಧದಲ್ಲಿ ಅಸು ನೀಗಿರುತ್ತಾರೆ. ಪರಸ್ತ್ರೀ ಲೋಲುಪನಾದ, ವಿಷಯ ಲಂಪಟನಾದ ಅಣ್ಣನಿಗೆ ಅಂತ್ಯ ಸಂಸ್ಕಾರ ಮಾಡಲು ವಿಭೀಷಣ ನಿರಾಕರಿಸುತ್ತಾನೆ. ಆಗ ರಾಮ ಎಲ್ಲರೂ, ಎಲ್ಲ ಕಾಲಕ್ಕೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಒಂದು ನೀತಿಯನ್ನು ಹೇಳುತ್ತಾನೆ.

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥

ಸಾಯುವವರೆಗಷ್ಟೇ ಹಗೆತನ. ಸತ್ತ ಮೇಲೆ ಯಾವ ವೈರವೂ ಇಲ್ಲ. ವಿಭೀಷಣ, ಈ ದಾನವೇಂದ್ರನ ಶವ ಸಂಸ್ಕಾರ ಮಾಡು. ಇವನು ನಿನಗೆ ಹೇಗೋ ಹಾಗೆ ನನಗೂ ಸೋದರನೇ.

ಇದೆಂಥ ಹೃದಯ ವೈಶಾಲ್ಯ? ಔದಾರ್ಯ?

ಹಾಗೆಯೇ ಪರಸ್ತ್ರೀಯರ ವಿಷಯದಲ್ಲಿ ಅನುಚಿತವಾಗಿ ನಡೆದುಕೊಳ್ಳುವವರಿಗೆ ಮರಣವೇ ಶಿಕ್ಷೆ ಎಂಬುದನ್ನು ವಾಲಿ, ರಾವಣ ಸಂಹಾರದ ಮೂಲಕ ಶ್ರೀರಾಮ ತೋರಿಸಿಕೊಟ್ಟಿದ್ದಾನೆ. ಇನ್ನು ಶೂರ್ಪಣಖಾ ಪ್ರಸಂಗದಲ್ಲೂ ಒಂದು ನೀತಿ ಇದ್ದೇ ಇದೆ. ವನವಾಸದ ಸಮಯದಲ್ಲಿ ರಾಮನ ಸೌಂದರ್ಯಕ್ಕೆ ಮರುಳಾದ ಶೂರ್ಪಣಖಿ ಮಾನವ ವೇಷದಲ್ಲಿ ಬಂದು ತನ್ನನ್ನು ಮದುವೆಯಾಗಬೇಕೆಂದು ಕೋರುತ್ತಾಳೆ. ಎಷ್ಟೇ ಹೇಳಿದರೂ ಕೇಳದ ಅವಳ ಕಾಟ ತಡೆಯಲಾರದೆ ರಾಮ ಅವಳನ್ನು ಲಕ್ಷ್ಮಣನ ಬಳಿಗೆ ಕಳಿಸುತ್ತಾನೆ. ಶೀಘ್ರಕೋಪಿಯಾದ ಲಕ್ಷ್ಮಣ ಅವಳ ಮೂಗನ್ನು ಕತ್ತರಿಸಿ ಓಡಿಸುತ್ತಾನೆ. ಇಲ್ಲೊಂದು ಪ್ರಶ್ನೆ ! ಕಾಮರೂಪಿಯಾದ ರಾಕ್ಷಸಿಗೆ ತನ್ನ ಮೂಗನ್ನು ಸರಿಮಾಡಿಕೊಳ್ಳಲು ಆಗುತ್ತಿರಲಿಲ್ಲವೆ? ಎಂಥೆಂಥ ರಾಕ್ಷಸರನ್ನೋ ಸದೆ ಬಡೆದಿದ್ದ ರಾಮನಿಗೆ ಅವಳನ್ನು ನಿವಾರಿಸಿಕೊಳ್ಳುವುದು ಅಷ್ಟು ಕಷ್ಟವಾಗಿತ್ತೆ? ಎಂದರೆ ಖಂಡಿತಾ ಇಲ್ಲ. ಪರಪುರುಷನನ್ನು ಕಾಮಿಸುವವರಿಗೆ ಒಂದು ಎಚ್ಚರಿಕೆ ನೀಡುವುದು, ಅಪರಾಧಿಗಳಿಗೂ ಸುಧಾರಣೆಗೆ ಒಂದು ಅವಕಾಶ ನೀಡಬೇಕೆಂಬುದು ರಾಮನ ಇಂಗಿತವಾಗಿತ್ತು. ಹಾಗಾಗಿ ಅವನು ಅವಳನ್ನು ಕೊಲ್ಲದೆ ಹಾಗೇ ಕಳಿಸಿದ್ದು. ಇದು ಎಂದೆಂದಿಗೂ ಪ್ರಸ್ತುತವೆನಿಸುವ ನೀತಿ ಸಂಹಿತೆಯಲ್ಲವೇ ?

ಯುದ್ಧವೆಲ್ಲ ಮುಗಿಯಿತು. ರಾವಣ ಸಂಹಾರವಾಯಿತು. ಆಗ ಲಕ್ಷ್ಮಣ ಒಂದು ಸಲಹೆ ನೀಡುತ್ತಾನೆ. 'ಅಧಿಕಾರದ ರುಚಿ ಕಂಡ ಭರತನ ಮನಃಸ್ಥಿತಿ ಈಗ ಹೇಗಿರುತ್ತದೋ ಏನೋ? ಅವನು ಅಲ್ಲೇ ಅಯೋಧ್ಯೆಯಲ್ಲೇ ರಾಜ್ಯಭಾರ ಮಾಡಿಕೊಂಡಿರಲಿ. ನಾವು ಇಲ್ಲೆ ಇದ್ದು ಬಿಡೋಣ.' ಆಗ ರಾಮ ನೀಡುವ ಉತ್ತರ ಏನು ಗೊತ್ತಾ ?

ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ।
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥

ಲಂಕೆ ಸ್ವರ್ಣಮಯವೇ ಆಗಿದ್ದರೂ ನನಗೆ ಒಂದಿಷ್ಟೂ ಇಷ್ಟವಾಗುವುದಿಲ್ಲ. ತಾಯಿ ಹಾಗೂ ತಾಯ್ನಾಡು ಸ್ವರ್ಗಕ್ಕಿಂತ ಮಿಗಿಲು. ಇದು ರಾಮ ಹೇಳುವ ಉತ್ತರ. ತಾಯ್ನೆಲದ ಬಗ್ಗೆ ಇಂಥ ಅಭಿಮಾನ ಎಲ್ಲರಲ್ಲೂ ಇರಲೇಬೇಕಲ್ಲವೇ ?

ನಂತರ ಅಯೋಧ್ಯೆಗೆ ಹಿಂತಿರುಗಿದ ಶ್ರೀರಾಮ ತಾಯಿ ಕೌಸಲ್ಯೆಗೆ ಹೇಳುವ ಮಾತು ಕೇಳಿ 'ರಾವಣ ಮಹಾಜ್ಞಾನಿ, ಚತುರ್ವೇದ ಪಂಡಿತ, ಅತುಲ ಪರಾಕ್ರಮಿ, ಉಗ್ರ ಪ್ರತಾಪಿ, ಎಲ್ಲ ಗುಣಗಳ ಸಾಕಾರ. ಅವನನ್ನು ನಾನು ಕೊಲ್ಲಲಿಲ್ಲ. ಅವನ ಅಹಂಕಾರವೇ ಕೊಂದಿತು.' ಅಹಂಕಾರ ಎಲ್ಲ ಅನಿಷ್ಟಗಳಿಗೂ ಮೂಲ ಎಂಬುದನ್ನು ಶ್ರೀರಾಮ ಸೂಚ್ಯವಾಗಿ ತಿಳಿಸಿದ ರೀತಿ ಇದು.

ಕೈಕೇಯಿಯ ದೇಹಾವಸಾನವಾಗಿತ್ತು. ಆಗ ಯಮಕಿಂಕರರಿಗೆ ಒಂದು ಜಿಜ್ಞಾಸೆ ಉಂಟಾಯಿತು. ಅವಳನ್ನು ಸ್ವರ್ಗಕ್ಕೆ ಒಯ್ಯಬೇಕೋ, ಇಲ್ಲ ನರಕಕ್ಕೋ ? ನೇರ ರಾಮನಲ್ಲಿಗೇ ಬಂದು ವಿಚಾರಿಸಿದರು. ರಾಮನದು ಒಂದೇ ಉತ್ತರ–'ಅವಳು ಜೀವನ ಮುಕ್ತೆ. ಮುಂದಿನ ಎಲ್ಲ ಪೀಳಿಗೆಗಳಿಗೂ ಆದರ್ಶಪ್ರಾಯವಾದ ಭರತನಂಥ ಗುಣಾಗ್ರಣಿಯನ್ನು ಲೋಕಕ್ಕೆ ಇತ್ತ ಮಹಾ ತಾಯಿ ಅವಳು. ನನ್ನ ಅವತಾರದ ಮೂಲ ಉದ್ದೇಶವಾದ ದುಷ್ಟ ಸಂಹಾರಕ್ಕೆ ನಾಂದಿ ಹಾಡಿದವಳೇ ಅವಳು. ಅವಳೊಂದು ವೇಳೆ ನನ್ನ ಪಟ್ಟಾಭಿಷೇಕಕ್ಕೆ ಸಮ್ಮತಿ ಇತ್ತಿದ್ದರೆ, ನಾನು ಜನ್ಮವೆತ್ತಿದ್ದೇ ವ್ಯರ್ಥವಾಗಿ ಬಿಡುತ್ತಿತ್ತು. ಅವಳಿಗೆ ಖಂಡಿತಾ ಮೋಕ್ಷವೇ ಸಿಗಬೇಕು.'

ಕೆಡುಕಿನಲ್ಲೂ ಒಳಿತನ್ನೇ ಕಾಣುವ ಈ ಗುಣ ಎಲ್ಲ ಕಾಲಕ್ಕೂ, ಎಲ್ಲರೂ ಅನುಸರಿಸಬೇಕಾದ ಮೌಲ್ಯವೇ ಅಲ್ಲವೇ?

ಹೀಗೆ ಪಟ್ಟಿ ಮಾಡುತ್ತಾ ಹೋದರೆ ರಾಮಾಯಣದ ಉದ್ದಕ್ಕೂ ಜೀವನ ಮೌಲ್ಯಗಳು ಹಾಸುಹೊಕ್ಕಾಗಿವೆ. ಒಂದೊಂದು ಪ್ರಸಂಗದಲ್ಲೂ ಒಂದೊಂದು ಮೌಲ್ಯ ಇದ್ದೇ ಇದೆ. ಗೀತೆಯ ತತ್ತ್ವವನ್ನೆಲ್ಲ ಒಂದು ಸುಂದರವಾದ ಕಥಾಹಂದರದಲ್ಲಿ ಕಟ್ಟಿಕೊಟ್ಟಿರುವುದು ವಾಲ್ಮೀಕಿ ಮಹರ್ಷಿಗಳ ವೈಶಿಷ್ಟ್ಯ. ಅದನ್ನು ಕಾಣುವ ಕಣ್ಣು, ಗ್ರಹಿಸುವ ಮನಸ್ಸು ನಮ್ಮದಾದರೆ ಬದುಕು ಸಾರ್ಥಕ. ✱